ಇಲ್ಲಿ ಹೂವೇ ಇಲ್ಲ ಎನ್ನುವುದು ಸರಿಯಲ್ಲ ಎಂದುಕೊಂಡಳು.'

'ಉದ್ಯಾನದಲ್ಲಿ ಯಾಕೆ ಹೂ ಇರಲಿಲ್ಲ?'

'ಯಾಕೆ ಅಂದ್ರೆ? ಹೂಗಳನ್ನೆಲ್ಲಾ ಹಂದಿಗಳು ತಿಂದು ಹಾಕಿದ್ವು. ಉದ್ಯಾನ ನೋಡಿಕೊಳ್ತಿದ್ದ ಮಾಲಿಗಳು ಅಲ್ಲಿ ಹೂಗಳು ಮತ್ತು ಹಂದಿಗಳು ಒಟ್ಟಿಗೇ ಇರಲು ಸಾಧ್ಯವಿಲ್ಲ, ಯಾವುದಾದರೂ ಒಂದು ಮಾತ್ರ ಇರಬಹುದು ಎಂದು ರಾಜಕುಮಾರನಿಗೆ ಹೇಳಿದ್ದರು. ಹೀಗೆ ರಾಜಕುಮಾರ ಹೂ ಬೇಡ, ಹಂದಿಗಳೇ ಇರಲಿ ಎಂದುಬಿಟ್ಟ.' ಯುವಕ ತಕ್ಷಣ ವಿವರಣೆ ಕೊಟ್ಟ. ರಾಜಕುಮಾರನ ತೀರ್ಮಾನ ಸರಿಯಾದದ್ದೇ, ಉಳಿದವರಾಗಿದ್ದರೆ ಹೂವೇ ಇರಲಿ ಎನ್ನುತ್ತಿದ್ರಲ್ವ? ಎಂದು ಮಕ್ಕಳು ಗುಜುಗುಜು ಮಾತಾಡಿಕೊಂಡರು.

'ಉದ್ಯಾನದಲ್ಲಿ ಸಂತೋಷ ಕೊಡುವ ಇನ್ನೂ ಬಹಳಷ್ಟು ಸಂಗತಿಗಳಿದ್ವು. ಅಲ್ಲಿ ಕೊಳಗಳಿದ್ದವು, ಕೊಳದಲ್ಲಿ ಬಂಗಾರದ ಬಣ್ಣದ ಮೀನುಗಳಿದ್ದವು, ನೀಲಿ ಮತ್ತು ಹಸಿರು ಬಣ್ಣದ ಮೀನುಗಳೂ ಇದ್ದವು. ಮರಗಳಿದ್ವು, ಮರದ ಮೇಲಿದ್ದ ಗಿಳಿಗಳು ಹೀಗೊಮ್ಮೆ ನೋಡಿದರೂ ಸಾಕು ತುಂಬ ಚೆಂದ ಮಾತಾಡುತ್ತಿದ್ದವು. ಹಾಡುವ ಹಕ್ಕಿಗಳಂತೂ ಆ ಕಾಲದ ಜನಪ್ರಿಯ ಹಾಡುಗಳ ಅನುಕರಣೆ ಮಾಡ್ತಿದ್ವು. ಬೆರ್ತಾ ಉದ್ಯಾನದ ಉದ್ದಗಲಕ್ಕೂ ಸುತ್ತಾಡಿ ಖುಶಿಗೊಂಡಳು. ನಾನು ತುಂಬಾ ತುಂಬಾ ಒಳ್ಳೆಯವಳಲ್ಲದಿದ್ದರೆ ನನಗೆ ಇಷ್ಟು ಚೆಂದದ ಉದ್ಯಾನಕ್ಕೆ ಬರಲು ಬಿಡ್ತಿರ್ಲಿಲ್ಲ ಮತ್ತು ನಂಗೆ ಇಷ್ಟೊಂದು ಸಂತೋಷ ಸಿಗ್ತಿರ್ಲಿಲ್ಲ ಎಂದು ಯೋಚಿಸಿದಳು. ಅವಳು ಅಡ್ಡಾಡುವಾಗ ಪದಕಗಳು ಬಡಿದುಕೊಂಡು ಸದ್ದು ಮಾಡಿ ನೀನು ಎಷ್ಟೊಂದು ಒಳ್ಳೆಯವಳು ಗೊತ್ತ ನಿಂಗೆ ಎಂದು ನೆನಪಿಸುತ್ತಿದ್ದವು. ಅದೇ ಹೊತ್ತಿಗೆ ಒಂದು ಭಾರೀ ತೋಳ ಬೇಟೆ ಹುಡುಕುತ್ತ ಅಲ್ಲಿಗೆ ಬಂದಿತು. ರಾತ್ರಿಯ ಊಟಕ್ಕೆ ಅದೊಂದು ಪುಷ್ಟವಾದ ಸಣ್ಣ ಹಂದಿಯ ಹುಡುಕಾಟ ನಡೆಸಿತ್ತು.'

ಮಕ್ಕಳಿಗೆ ಕತೆಯಲ್ಲಿ ಈಗ ಕುತೂಹಲ ವಿಪರೀತ ಹೆಚ್ಚಾಯಿತು. 'ತೋಳದ ಬಣ್ಣ?' ಎಂದು ಎಲ್ಲರೂ ಒಂದೇ ಬಾರಿಗೆ ಕೇಳಿದರು.

'ತೋಳ ಪೂರ್ತಿ ಕೆಸರಿನ ಬಣ್ಣದಲ್ಲಿತ್ತು. ನಾಲಿಗೆ ಕಪ್ಪು ಅಂದ್ರೆ ಅಷ್ಟಿಷ್ಟಲ್ಲ, ಕಣ್ಣಂತೂ ಬೂದುಗೆಂಪು, ಕಣ್ಣಿನಲ್ಲಿ ಅದರ ಕ್ರೌರ್ಯ ಎದ್ದು ಕಾಣ್ತಾ ಇತ್ತು. ಅಲ್ಲಿ ಮೊದಲು ತೋಳದ ಕಣ್ಣಿಗೆ ಬಿದ್ದದ್ದು ಬೆರ್ತಾ. ಅವಳು ತೊಟ್ಟ ಶುಭ್ರ ಬಿಳಿ ಫ್ರಾಕ್ ದೂರದಿಂದಲೇ ಕಾಣುವಂತಿತ್ತು. ಮೆಲ್ಲಗೆ ತನ್ನ ಕಡೆಗೆ ತೋಳ ಮುಂದುವರೆಯುತ್ತಿರುವುದು ಅವಳಿಗೆ ಗೊತ್ತಾಯಿತು. ತನಗೆ ಈ ಉದ್ಯಾನಕ್ಕೆ ಬರಲು ಅನುಮತಿಯಾದರೂ ಯಾಕೆ ಸಿಕ್ಕಿತೋ ಎಂದು ಕಂಗಾಲಾದಳು, ತೋಳದಿಂದ ತಪ್ಪಿಸಿಕೊಳ್ಳಲು ಶಕ್ತಿ ಮೀರಿ ಓಡಿದಳು. ತೋಳವೂ ಜಿಗಿಯುತ್ತ ಬರತೊಡಗಿತು. ಬೆರ್ತಾಳಿಗೆ ಅಷ್ಟರಲ್ಲೊಂದು ಹಸಿರಾದ ದಟ್ಟ ಪೊದೆ ಕಾಣಿಸಿತು, ಅದರೊಳಗೆ ಹೊಕ್ಕು ಅಡಗಿಕೊಂಡಳು. ತೋಳ ಸುತ್ತಲೂ ಮೂಸುತ್ತ ಬರುತ್ತಿತ್ತು. ಅದರ ಕಪ್ಪು ನಾಲಿಗೆ ಹೊರಚಾಚಿತ್ತು ಮತ್ತು ಅದರ ಬೂದುಗೆಂಪು ಕಣ್ಣುಗಳಲ್ಲಿ ಭಯಂಕರ ಸಿಟ್ಟು ತುಂಬಿಕೊಂಡಿತ್ತು. ಬೆರ್ತಾ ಪೂರ್ತಿ ಹೆದರಿಹೋಗಿದ್ದಳು, ನಾನು ಅಷ್ಟೊಂದು ಒಳ್ಳೆಯವಳಾಗಿರದಿದ್ದರೆ ಪಟ್ಟಣದಲ್ಲಿಯೇ ಆರಾಮಾಗಿ ಉಳಿಯುತ್ತಿದ್ದೆ ಎಂದು ಯೋಚಿಸಿದಳು. ಆ ಹಸಿರು ಪೊದೆ ಭಯಂಕರವಾದ ಕಟು ವಾಸನೆಯಿಂದ ತುಂಬಿದ್ದರಿಂದ ಮೂಸಿದರೂ ತೋಳಕ್ಕೆ ಬೆರ್ತಾ ಅಡಗಿದ್ದು ಗೊತ್ತಾಗಲಿಲ್ಲ. ಎಷ್ಟು ಹುಡುಕಾಡಿದರೂ ಕಾಣದಷ್ಟು ಪೊದೆ ದಟ್ಟವಾಗಿದ್ದರಿಂದ ಕೊನೆಗೆ ಹಂದಿಯನ್ನು ಹುಡುಕುತ್ತ ತೋಳ ಬೇರೆ ದಾರಿ ಹಿಡಿಯಿತು. ಮೂಸುತ್ತ ಹುಡುಕುತ್ತ ತೋಳ ತೀರಾ ಹತ್ತಿರ ಬಂದು ಹೋಗಿದ್ದರಿಂದ ಬೆರ್ತಾ ನಡುಗತೊಡಗಿದ್ದಳು. ಅದರಿಂದ ಅವಳು ಧರಿಸಿದ್ದ ಪದಕಗಳು ಒಂದಕ್ಕೊಂದು ಹೊಡೆದುಕೊಂಡು ಸದ್ದು ಮಾಡಿದವು. ಆಗಷ್ಟೆ ತೋಳ ಅತ್ತ ತಿರುಗಿತ್ತಷ್ಟೆ, ಅದಕ್ಕೆ ಆ ಸದ್ದು ಕೇಳಿಸಿತು. ನಿಂತು ಆಲಿಸಿದ ತೋಳಕ್ಕೆ ಬೆರ್ತಾಳ ವಾಸನೆ ಬಡಿಯಿತು. ತೋಳ